43

(1)

**ದಿನಾಂಕ: 07-01-2012ರಂದು ಪೂರ್ವಾಹ್ನ: 11-00 ಗಂಟೆಗೆ ಹೊಯ್ಸಳ ಸಭಾಂಗಣ, ಹಾಸನ ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳು**

ಅಧ್ಯಕ್ಷತೆ: ಶ್ರೀ ಹುಚ್ಚೇಗೌಡ,
ಅಧ್ಯಕ್ಷರು,
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ.

ಹಾಜರಿ :07 ಗೈರು ಹಾಜರಿ:00

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಸಹಾಯಕ ಕಾರ್ಯದರ್ಶಿ(ಅಭಿವೃದ್ಧಿ)ರವರು ಸಭೆಗೆ ಹಾಜರಿದ್ದ ಮಾನ್ಯ ಅಧ್ಯಕ್ಷರು, ಸಮಿತಿ ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು. | |
| | ರೇಷ್ಮೆ ಇಲಾಖೆಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಕೃಕೈಸ್ಥಾ/ರೇಷ್ಮೆ/2011-12 ದಿನಾಂಕ: 23-12-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಿ ಅನುಮೋದನೆ ನೀಡುವಂತೆ ಕೋರಿರುತ್ತಾರೆ.<br>1. ಪ್ಯಾರಾಪಿನ್ ಪೇಪರ್ ಖರೀದಿಸಲು ಆಡಳಿತ ಮಂಜೂರಾತಿ ನೀಡುವ ಬಗ್ಗೆ ರೂ.89,681/-<br>2. ಹೊಯ್ಸಳ ಉತ್ಸವ ನಿಮಿತ್ತ ರೇಷ್ಮೆ ಕೃಷಿ ಮಳಿಗೆಗಳನ್ನು ತೆರೆಯಲು ಅನುದಾನ ಬಿಡುಗಡೆ ಕುರಿತು ರೂ.50000/-<br>3. ಪವರ್ ಸ್ಪ್ರೇಯರ್‌ಗಳನ್ನು ಖರೀದಿಸಲು ಆಡಳಿತ ಮಂಜೂರಾತಿ ನೀಡುವ ಬಗ್ಗೆ ರೂ.93000/-<br>4. ಬೆಡ್ ಕ್ಲೀನಿಂಗ್ ನೆಟ್ ಖರೀದಿಸಲು ಆಡಳಿತ ಮಂಜೂರಾತಿ ನೀಡುವ ಬಗ್ಗೆ ರೂ.90000/-<br>5. ಊಜಿ ನಿಯಂತ್ರಣ ನೈಲಾನ್ ಬಲೆ ಖರೀದಿಸಲು ಆಡಳಿತ ಮಂಜೂರಾತಿ ನೀಡುವ ಬಗ್ಗೆ ರೂ.79,920/-<br>6. ಸಸ್ಯ ಸಂವರ್ಧಕ ಖರೀದಿಸಲು ಆಡಳಿತ ಮಂಜೂರಾತಿ ನೀಡುವ ಬಗ್ಗೆ ರೂ.90,000/-<br>7. ಸಾಮಾನ್ಯ ಸೋಂಕು ನಿವಾರಕಗಳನ್ನು ಖರೀದಿಸಲು ಆಡಳಿತ ಮಂಜೂರಾತಿ ನೀಡುವ ಬಗ್ಗೆ ರೂ. 3,50,757/- | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಿ ಕೆಳಕಂಡಂತೆ ಅನುಮೋದನೆ ನೀಡಲಾಯಿತು.<br>1. ಪ್ರತಿ ಪ್ಯಾರಾಪಿನ್ ಪೇಪರ್ ರೋಲ್‌ಗೆ ರೂ.459.00ರಂತೆ ಅತ್ಯಂತ ಕಡಿಮೆ ದರ ಸೂಚಿಸಿರುವ ಮೆ: ಜಿ.ಆರ್.ಇಂಡಸ್ಟ್ರೀಸ್, ನಂ.36/ಸಿ, 1ನೇ ಮಹಡಿ, 2ನೇ ಮೈನ್, 12ನೇ ಬಿ ಕ್ರಾಸ್, ಅಗ್ರಹಾರ, ದಾಸರಹಳ್ಳಿ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು-79 ಇವರಿಂದ ರೂ.89,681/- (ರೂಪಾಯಿ ಎಂಬತ್ತೊಂಬತ್ತು ಸಾವಿರದ ಆರುನೂರ ಎಂಬತ್ತೊಂದು ಮಾತ್ರ)ಗಳಲ್ಲಿ 2011-12ನೇ ಸಾಲಿನ ಲೆಕ್ಕಶೀರ್ಷಿಕೆ 2851-00-107-0-26 (ಯೋಜನೇತರ) ವೇತನೇತರದಡಿ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಖರೀದಿಲು ಮಂಜೂರಾತಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>2. ಹೊಯ್ಸಳ ಉತ್ಸವ ನಡೆಯುವ ಸ್ಥಳಗಳಲ್ಲಿ ರೇಷ್ಮೆ ಕೃಷಿ ವಸ್ತು ಪ್ರದರ್ಶನ ಏರ್ಪಡಿಸಲು ಅವಶ್ಯಕತೆಯಿರುವ ರೂ.50000/-ಗಳನ್ನು ಯೋಜನೇತರ ಲೆಕ್ಕಶೀರ್ಷಿಕೆ 2851-00-107-0-26 ರಡಿ ವೇತನೇತರ ಕಾರ್ಯಕ್ರಮವನ್ನು ವಿನಿಯೋಗಿಸಿಕೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>3. ಪ್ರತಿ ಪವರ್ ಸ್ಪ್ರೇಯರ್‌ಗೆ ರೂ.15500/-ರಂತೆ ಅತ್ಯಂತ ಕಡಿಮೆ ದರ ನಮೂದಿಸಿರುವ ಮೆ: ರೈತ ಮಿತ್ರ ಫಾರಂ ಎಕ್ಯೂಪ್‌ಮೆಂಟ್ಸ್, ಬೇಲೂರು ರಸ್ತೆ, ತಣ್ಣೀರುಹಳ್ಳ, ಹಾಸನ -573201 ಇವರಿಂದ ರೂ.93000/- (ರೂಪಾಯಿ ತೊಂಬತ್ತಮೂರು ಸಾವಿರ ಮಾತ್ರ)ಗಳಲ್ಲಿ 2011-12ನೇ ಸಾಲಿನ ಲೆಕ್ಕಶೀರ್ಷಿಕೆ |

2851-00-107-0-26 (ಯೋಜನೇತರ) ವೇತನೇತರದಡಿ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಅನುಮೋದನೆ ನೀಡಲಾಯಿತು.

4. ಪ್ರತಿ ಬೆಡ್ ಕ್ಲೀನಿಂಗ್ ನೆಟ್‌ಗೆ ರೂ.36.00ರಂತೆ ಅತ್ಯಂತ್ ಕಡಿಮೆ ದರ ನಮೂದಿಸಿರುವ ರವಿ ಎಂಟರ್‌ಪ್ರೈಸಸ್, ಭೈರವೇಶ್ವರ ನಿಲಯ, 3ನೇ ಕ್ರಾಸ್, ಕೃಷ್ಣ ನಗರ, ಎಸ್.ಐ.ಟಿ ಎಕ್ಸ್‌ಟೇಷನ್, ತುಮಕೂರು ಇವರಿಂದ ರೂ. 90000/-(ರೂಪಾಯಿ ತೊಂಬತ್ತು ಸಾವಿರ ಮಾತ್ರ)ಗಳಲ್ಲಿ 2011-12ನೇ ಸಾಲಿನ ಲೆಕ್ಕಶೀರ್ಷಿಕೆ 2851-00-107-0-26 (ಯೋಜನೇತರ) ವೇತನೇತರದಡಿ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಖರೀದಿಸಲು ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

5. ಪ್ರತಿ ಊಜಿ ನಿಯಂತ್ರಣ ನೈಲನ್ ಬಲೆಗೆ ರೂ. 555/-ರಂತೆ ಅತ್ಯಂತ ಕಡಿಮೆ ದರ ನಮೂದಿಸಿರುವ ಮೆ: ಜಿ.ಆರ್.ಇಂಡಸ್ಟ್ರೀಸ್, ನಂ.36/ಸಿ, 1ನೇ ಮಹಡಿ, 2ನೇ ಮೈ, 12ನೇ ಬಿ ಕ್ರಾಸ್, ಅಗ್ರಹಾರ, ದಾಸರಹಳ್ಳಿ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು ಇವರಿಂದ ರೂ. 79,920/-(ರೂಪಾಯಿ ಎಪ್ಪತ್ತೊಂಬತ್ತು ಸಾವಿರದ ಒಂಬೈನೂರ ಇಪ್ಪತ್ತು ಮಾತ್ರ)ಗಳಲ್ಲಿ 2011-12ನೇ ಸಾಲಿನ ಲೆಕ್ಕಶೀರ್ಷಿಕೆ 2851-00-107-0-26 (ಯೋಜನೇತರ) ವೇತನೇತರದಡಿ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಖರೀದಿಸಲು ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

6. ಸಸ್ಯ ಸಂವರ್ಧಕದ ಪ್ರತಿ ಲೀಟರಿಗೆ ರೂ.300.00ರಂತೆ ಅತ್ಯಂತ ಕಡಿಮೆ ದರ ನಮೂದಿಸಿರುವ ಮೆ: ಟ್ರಿಯಂಪ್ ಫಾರ್ಮ್ಯಾಸುಟಿಕಲ್ಸ್, ಪ್ರೈ.ಲಿ: ನಂ.91ಎ, ಬೆಳಗೊಳ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ ಮೈಸೂರು-16 ಇವರಿಂದ ರೂ. 90000/-(ರೂಪಾಯಿ ತೊಂಬತ್ತು ಸಾವಿರ ಮಾತ್ರ)ಗಳಲ್ಲಿ 2011-12ನೇ ಸಾಲಿನ ಲೆಕ್ಕಶೀರ್ಷಿಕೆ 2851-00-107-0-26 (ಯೋಜನೇತರ) ವೇತನೇತರದಡಿ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಖರೀದಿಸಲು ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

7. ರೇಷ್ಮೆ ಹುಳುಗಳಿಗೆ ತಗಲುವ ರೋಗಗಳ ನಿಯಂತ್ರಣಕ್ಕಾಗಿ ಸಾಮಾನ್ಯ ಸೋಂಕು ನಿವಾರಕವಾದ ಬ್ಲೀಚಿಂಗ್ ಪೌಡರನ್ನು ಪ್ರತಿ ಕೆ.ಜಿಗೆ ರೂ.29.70ರಂತೆ ಅತ್ಯಂತ ಕಡಿಮೆ ದರ ನಮೂದಿಸಿರುವ ಮೆ: ಶ್ರೀ ರಾಯಲ್ ಸೀಮಾ ಹೈಸ್ಟ್ರೆಂಡ್ ಹೈಪೋ ಲಿಮಿಟೆಡ್, ನಂ.216, ಕೆ.ಜೆ.ಎಸ್. ಕಾಂಪ್ಲೆಕ್ಸ್, ಭಾಗ್ಯನಗರ, ಕರ್ನೂಲ್, ಆಂಧ್ರಪ್ರದೇಶ್-518004 ಇವರಿಂದ

44

| | | | |
|---|---|---|---|
| | | | ರೂ.3,50,757/-(ರೂಪಾಯಿ ಮೂರು ಲಕ್ಷದ ಐವತ್ತು ಸಾವಿರದ ಏಳುನೂರ ಐವತ್ತೇಳು ಮಾತ್ರ)ಗಳಲ್ಲಿ 2011-12ನೇ ಸಾಲಿನ ಲೆಕ್ಕಶೀರ್ಷಿಕೆ 2851-00-104-0-30 (ಯೋಜನೆ) ರೇಷ್ಮೆ ಬೆಳೆಗಾರರಿಗೆ ಸಹಾಯ ಕಾರ್ಯಕ್ರಮದಡಿ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಖರೀದಿಸಲು ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 2 | ಪಶುಪಾಲನಾ ಇಲಾಖೆಯ ಆಸ್ಪತ್ರೆ ಮತ್ತು ಔಷಧಾಲಯಗಳು ಲೆಕ್ಕ ಶೀರ್ಷಿಕೆಯಡಿ ಜೀವರಕ್ಷಕ ಔಷಧಗಳ ಪೂರೈಕೆ-ಆಡಳಿತ ಮಂಜೂರಾತಿ ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಪಶುಪಾಲನೆ/2011-12 ದಿನಾಂಕ: 23-12-2011ರಂದು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆರವರು ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಿ ಅನುಮೋದನೆ ನೀಡುವಂತೆ ಕೋರಿರುತ್ತಾರೆ.<br>1. ಆಸ್ಪತ್ರೆ ಮತ್ತು ಔಷಧಾಲಯಗಳು ಲೆಕ್ಕಶೀರ್ಷಿಕೆಯಡಿ ಆಸ್ಪತ್ರೆಗಳಿಗೆ ದ್ರವಸಾರಜನಕ ಪೂರೈಸಲು ಅನುಮೋದನೆ ಬಗ್ಗೆ.<br>2. ಅರಕೆರೆ ಗ್ರಾಮ, ಅರಸೀಕೆರೆ ತಾ: ಇಲ್ಲಿನ ಕೃತಕ ಗರ್ಭಧಾರಣಾ ಕೇಂದ್ರವನ್ನು ಮೇಲ್ದರ್ಜೆಗೇರಿಸಿ, ಪಶು ಚಿಕಿತ್ಸಾಲಯವನ್ನಾಗಿ ಪರಿವರ್ತಿಸುವ ಬಗ್ಗೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು ಪಶುಪಾಲನಾ ಇಲಾಖೆರು ಕೋರಿರುವಂತೆ ಕೆಳಕಂಡ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಯಿತು.<br>1. ಆಸ್ಪತ್ರೆ ಮತ್ತು ಔಷಧಾಲಯಗಳು ಲೆಕ್ಕಶೀರ್ಷಿಕೆಯಡಿ ಆಸ್ಪತ್ರೆಗಳಿಗೆ ದ್ರವಸಾರಜನಕವನ್ನು ಹಾಸನ ಹಾಲು ಒಕ್ಕೂಟದ ದರಗುತ್ತಿಗೆಯಂತೆ ಪ್ರತಿ ಲೀಟರಿಗೆ ರೂ.11.00 ರಂತೆ (ತೆರಿಗೆ ಪ್ರತ್ಯೇಕ) 2011-12ನೇ ಸಾಲಿನ 2403-00-101-0-27 ಆಸ್ಪತ್ರೆ ಮತ್ತು ಔಷಧಾಲಯಗಳು ಯೋಜನೆಯಡಿ ನಿಯಮಾನುಸಾರ ಖರೀದಿಸಲು ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>2. ಅರಕೆರೆ ಗ್ರಾಮ, ಅರಸೀಕೆರೆ ತಾ; ಇಲ್ಲಿನ ಕೃತಕ ಗರ್ಭಧಾರಣಾ ಕೇಂದ್ರವನ್ನು ಮೇಲ್ದರ್ಜೆಗೇರಿಸಿ ಪಶುಚಿಕಿತ್ಸಾಲಯವನ್ನಾಗಿ ಪರಿವರ್ತಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 3 | ಸಾಮಾಜಿಕ ಅರಣ್ಯ ವಿಭಾಗದ ಇಲಾಖೆಯ ಪ್ರಸ್ತಾವನೆಗೆ ಅನುಮೋದನೆ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಸಾ.ಅರಣ್ಯ/2011-12 ದಿನಾಂಕ: 23-12-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಿ ಅನುಮೋದನೆ ನೀಡುವಂತೆ ಕೋರಿರುತ್ತಾರೆ.<br>1. ಎಂಟು ತಾಲ್ಲೂಕುಗಳಲ್ಲಿ ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ಸಾಮಾಜಿಕ ಅರಣ್ಯ ವಿಭಾಗವು ಹಮ್ಮಿಕೊಂಡ ಕಾರ್ಯಕ್ರಮಗಳ ಸಾರ್ಥಕ ಕೆಲಸಗಳನ್ನು ದಾಖಲೀಕರಣ ಮಾಡಿ ಯಶೋಗಾಥೆ ತಯಾರಿಸಲು ಕ್ಷೇತ್ರಕಾರ್ಯ ಬರವಣಿಗೆ, ಛಾಯಾಚಿತ್ರಗಳ ಖರ್ಚು ವೆಚ್ಚಗಳೂ ಸೇರಿ ಕನ್ನಡದಲ್ಲಿ 500 ಪ್ರತಿಗಳನ್ನು ಇಂಗ್ಲೀಷಿನಲ್ಲಿ 10 ಪ್ರತಿಗಳನ್ನು ಎಂ.ಜಿ.ಎನ್.ಆರ್.ಇ.ಜಿ.ಎ ಆಡಳಿತ ವೆಚ್ಚಕ್ಕೆ ಲಭ್ಯವಿರುವ ಅನುದಾನದಲ್ಲಿ ರೂ.38000/-ಗಳಲ್ಲಿ ಕೊಟೇಷನ್ ಕರೆದು ವಿನ್ಯಾಸಗೊಳಿಸಲು ಅನುಮೋದನೆ ನೀಡುವ ಬಗ್ಗೆ.<br>2. ವಲಯ ಅರಣ್ಯಾಧಿಕಾರಿಗಳ ಕಛೇರಿ, ಅರಕಲಗೂಡು ಇಲ್ಲಿನ ಗಣಕ ಯಂತ್ರಕ್ಕೆ ಯು.ಪಿ.ಎಸ್ ಅನ್ನು ಎಂ.ಜಿ.ಎನ್.ಆರ್.ಇ.ಜಿ.ಎ ಆಡಳಿತ ವೆಚ್ಚಕ್ಕೆ ಲಭ್ಯವಿರುವ | ಸಭೆಯಲ್ಲಿ ಸಾಮಾಜಿಕ ಅರಣ್ಯ ವಿಭಾಗದ ವತಿಯಿಂದ ಸಲ್ಲಿಸಿರುವ ಪ್ರಸ್ತಾವನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು.<br>ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಸಲ್ಲಿಸಿರುವ ಪ್ರಸ್ತಾವನೆಗಳಿಗೆ ಕೆಳಕಂಡಂತೆ ಅನುಮೋದನೆ ನೀಡಲಾಯಿತು.<br>1. ಎಂಟು ತಾಲ್ಲೂಕುಗಳಲ್ಲಿ ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ಸಾಮಾಜಿಕ ಅರಣ್ಯ ವಿಭಾಗವು ಹಮ್ಮಿಕೊಂಡ ಕಾರ್ಯಕ್ರಮಗಳ ಸಾರ್ಥಕ ಕೆಲಸಗಳನ್ನು ದಾಖಲೀಕರಣ ಮಾಡಿ ಯಶೋಗಾಥೆ ತಯಾರಿಸಲು ಕ್ಷೇತ್ರಕಾರ್ಯ ಬರವಣಿಗೆ, ಛಾಯಾಚಿತ್ರಗಳ ಖರ್ಚು ವೆಚ್ಚಗಳೂ ಸೇರಿ ಕನ್ನಡದಲ್ಲಿ 500 ಪ್ರತಿಗಳನ್ನು ಇಂಗ್ಲೀಷಿನಲ್ಲಿ 10 ಪ್ರತಿಗಳನ್ನು ಅತ್ಯಂತ ಕಡಿಮೆ ದರ ನಮೂದಿಸಿರುವ ಪುಣ್ಯಭೂಮಿ ಅಲೂರು ತಾಲ್ಲೂಕು, ಹಾಸನ ಜಿಲ್ಲೆ ಇವರ ವತಿಯಿಂದ ಎಂ.ಜಿ.ಎನ್.ಆರ್.ಇ.ಜಿ.ಎ. ಆಡಳಿತ ವೆಚ್ಚಕ್ಕೆ ಲಭ್ಯವಿರುವ ಅನುದಾನದಲ್ಲಿ ರೂ.38000/-ಗಳಲ್ಲಿ ಕೊಟೇಷನ್ ಕರೆದು ವಿನ್ಯಾಸಗೊಳಿಸಲು ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

| | | | |
|---|---|---|---|
| | | ಅನುದಾನದಲ್ಲಿ ರೂ.10500/-ಗಳಲ್ಲಿ ಕೊಟೇಷನ್ ಕರೆದು ಖರೀದಿಸಲು ಅನುಮೋದನೆ ನೀಡುವ ಬಗ್ಗೆ.<br>3. ವಲಯ ಅಣ್ಯಾಧಿಕಾರಿಗಳ ಕಛೇರಿ, ಹಾಸನ, ಚಿಕ್ಕಡಲೂರು. ಸಸ್ಯಕ್ಷೇತ್ರಕ್ಕೆ 2 ಹೆಚ್.ಪಿ.ಡೀಸೆಲ್ ಪಂಪ್‌ಸೆಟ್ ಅನ್ನು ಸಾಮಾಜಿಕ ಅರಣ್ಯ ವಿಭಾಗದ 2011-12ನೇ ಸಾಲಿನ ಲೆಕ್ಕಶೀರ್ಷಿಕೆಯಡಿ 2406-00-1-101-0-26ರಡಿ ಲಭ್ಯವಿರುವ ಅನುದಾನದಲ್ಲಿ ಖರೀದಿಸಲು ಅನುಮೋದನೆ ನೀಡುವ ಬಗ್ಗೆ.<br>4. ಚಿಕ್ಕಡಲೂರು ಸಸ್ಯಕ್ಷೇತ್ರ ಮತ್ತು ಹಾಲುವಾಗಿಲು ಸಸ್ಯಕ್ಷೇತ್ರದಿಂದ ರೈತರಿಗೆ/ಸಂಘಸಂಸ್ಥೆಗಳಿಗೆ/ಶಾಲೆಗಳಿಗೆ ಉಚಿತವಾಗಿ 985 ಸಸಿಗಳನ್ನು ಹಂಚಿಕೆ ಮಾಡಿರುವುದಕ್ಕೆ ಅನುಮೋದನೆ ನೀಡುವ ಬಗ್ಗೆ.<br>5. ವಲಯ ಅರಣ್ಯಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಲಯ, ಸಕಲೇಶಪುರ ಇಲ್ಲಿನ ಆಲೂರು ತಾಲ್ಲೂಕು ವಾಟೆಹೊಳೆ ಸಸ್ಯಕ್ಷೇತ್ರವನ್ನು ಪಾಳ್ಯ ಹೋಬಳಿ ಸಿಂಧುವಳ್ಳಿ ಗ್ರಾಮದ ಸರ್ವೆ ನಂ.85ರಲ್ಲಿ ಹೊಸದಾಗಿ ಸಸ್ಯಕ್ಷೇತ್ರ ನಿರ್ಮಿಸಲು ಸ್ಥಳ ಬದಲಾವಣೆಗೆ ಅನುಮೋದನೆ ನೀಡುವ ಬಗ್ಗೆ.<br>6. ಸಕಲೇಶಪುರ ತಾಲ್ಲೂಕಿನಲ್ಲಿ ಜನಪ್ರತಿನಿಧಿಗಳಿಗೆ ಬಾಗೆ ಸಸ್ಯಕ್ಷೇತ್ರದಿಂದ 15000 ಸಸಿಗಳು ಮತ್ತು ಐಗೂರು ಸಸ್ಯಕ್ಷೇತ್ರದಿಂದ 9000 ಸಸಿಗಳು ಒಟ್ಟು 24000 ಸಸಿಗಳನ್ನು ಹಂಚಿಕೆ ಮಾಡಿರುವುದಕ್ಕೆ ಅನುಮೋದನೆ ನೀಡುವ ಬಗ್ಗೆ. | 2. ವಲಯ ಅರಣ್ಯಾಧಿಕಾರಿಗಳ ಕಛೇರಿ, ಅರಕಲಗೂಡು ಇಲ್ಲಿನ ಗಣಕ ಯಂತ್ರಕ್ಕೆ ಯು.ಪಿ.ಎಸ್ ಅನ್ನು ದರಪಟ್ಟಿಯಲ್ಲಿ ಅತ್ಯಂತ ಕಡಿಮೆ ದರ ನಮೂದಿಸಿರುವ ಮಲ್ನಾಡ್ ಇನ್ಫೋ ಸಿಸ್ಟಮ್ಸ್, ಹಾಸನ ಇವರಿಂದ ಎಂ.ಜಿ.ಎನ್.ಆರ್.ಇ.ಜಿ.ಎ ಆಡಳಿತ ವೆಚ್ಚಕ್ಕೆ ಲಭ್ಯವಿರುವ ಅನುದಾನದಲ್ಲಿ ರೂ.10500/-ಗಳಲ್ಲಿ ಕೊಟೇಷನ್ ಕರೆದು ಖರೀದಿಸಲು ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>3. ವಲಯ ಅಣ್ಯಾಧಿಕಾರಿಗಳ ಕಛೇರಿ, ಹಾಸನ, ಚಿಕ್ಕಡಲೂರು ಸಸ್ಯಕ್ಷೇತ್ರಕ್ಕೆ 2 ಹೆಚ್.ಪಿ.ಡೀಸೆಲ್ ಪಂಪ್‌ಸೆಟ್ ಅನ್ನು ಆಹ್ವಾನಿತ ದರಪಟ್ಟಿಗಳಲ್ಲಿ ಅತ್ಯಂತ ಕಡಿಮೆ ದರ ನಮೂದಿಸಿರುವ ಸಿರಿ ಏಜನ್ಸೀಸ್, ಬಿ.ಎಂ.ರಸ್ತೆ, ಹಾಸನ ಇವರಿಂದ ಸಾಮಾಜಿಕ ಅರಣ್ಯ ವಿಭಾಗದ 2011-12ನೇ ಸಾಲಿನ ಲೆಕ್ಕಶೀರ್ಷಿಕೆಯಡಿ 2406-00-1-101-0-26ರಡಿ ಲಭ್ಯವಿರುವ ಅನುದಾನದಲ್ಲಿ ಖರೀದಿಸಲು ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. ಮತ್ತು ಹಳೆಯ ಸಾಮಗ್ರಿಗಳನ್ನು ದಾಸ್ತಾನು ರಿಜಿಸ್ಟರಿನಲ್ಲಿ ನಿಯಮಾನುಸಾರ ದಾಖಲಿಸಲು ಸೂಚಿಸಲಾಯಿತು.<br>4. ಚಿಕ್ಕಡಲೂರು ಸಸ್ಯಕ್ಷೇತ್ರ ಮತ್ತು ಹಾಲುವಾಗಿಲು ಸಸ್ಯಕ್ಷೇತ್ರದಿಂದ ರೈತರಿಗೆ/ಸಂಘಸಂಸ್ಥೆಗಳಿಗೆ/ಶಾಲೆಗಳಿಗೆ ಉಚಿತವಾಗಿ 985 ಸಸಿಗಳನ್ನು ಹಂಚಿಕೆ ಮಾಡಿರುವುದಕ್ಕೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.<br>5. ವಲಯ ಅರಣ್ಯಾಧಿಕರಿಗಳ ಕಛೇರಿ, ಸಾಮಾಜಿಕ ಅರಣ್ಯ ವಲಯ, ಸಕಲೇಶಪುರ ಇಲ್ಲಿನ ಆಲೂರು ತಾಲ್ಲೂಕು ವಾಟೆಹೊಳೆ ಸಸ್ಯಕ್ಷೇತ್ರವನ್ನು ಪಾಳ್ಯ ಹೋಬಳಿ ಸಿಂಧುವಳ್ಳಿ ಗ್ರಾಮದ ಸರ್ವೆ ನಂ.85ರಲ್ಲಿ ಹೊಸದಾಗಿ ಸಸ್ಯಕ್ಷೇತ್ರ ನಿರ್ಮಿಸಲು ಸ್ಥಳ ಬದಲಾವಣೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿನದ ನಿರ್ಣಯಿಸಲಾಯಿತು. ಈ ನಿರ್ಣಯವನ್ನು ಏಪ್ರಿಲ್ 1 ರಿಂದ ಅನ್ವಯಿಸಲು ಸೂಚಿಸಲಾಯಿತು.<br>6. ಸಕಲೇಶಪುರ ತಾಲ್ಲೂಕಿನಲ್ಲಿ ಜನಪ್ರತಿನಿಧಿಗಳಿಗೆ ಬಾಗೆ ಸಸ್ಯಕ್ಷೇತ್ರದಿಂದ 15000 ಸಸಿಗಳು ಮತ್ತು ಐಗೂರು ಸಸ್ಯಕ್ಷೇತ್ರದಿಂದ 9000 ಸಸಿಗಳು ಒಟ್ಟು 24000 ಸಸಿಗಳನ್ನು ಹಂಚಿಕೆ ಮಾಡಿರುವುದಕ್ಕೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 4 | ಸಹಕಾರ ಇಲಾಖೆಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಸಹಕಾರ/2011-12 ದಿನಾಂಕ: 23-12ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿಬಂಧಕರು, ಸಹಕಾರ ಇಲಾಖೆರವರು ಕೆಳಕಂಡಂತೆ ಪ್ರಸ್ತಾವನೆಗಳನ್ನು ಸಲ್ಲಿಸಿ ಅನುಮೋದನೆ ನೀಡುವಂತೆ ಕೋರಿರುತ್ತಾರೆ.<br>1. 2011-12ನೇ ಸಾಲಿನ ವಿವಿಧ ವರ್ಗದ ಸಹಕಾರ ಸಂಘಗಳಿಗೆ ಷೇರು | ಸಭೆಯಲ್ಲಿ ಸಹಕಾರ ಇಲಾಖೆಯ ಪ್ರಸ್ತಾವನೆಗಳ ಬಗ್ಗೆ ಸಮಗ್ರವಾಗಿ ಪರಿಶೀಲಿಸಲಾಯಿತು.<br>1. 2011-12ನೇ ಸಾಲಿನ ವಿವಿಧ ವರ್ಗದ ಸಹಕಾರ ಸಂಘಗಳಿಗೆ ಷೇರು ಬಂಡವಾಳ ಸಹಾಯ ಯೋಜನೆಯಡಿ ಅನುದಾನವನ್ನು ತಲಾ ರೂ.50000/-ದಂತೆ ಜಿಲ್ಲೆಯ ಸಹಕಾರ ಸಂಘಗಳ ಗೋದಾಮು ರಿಪೇರಿಗೆ ನಿಗದಿಪಡಿಸಿರುವುದಕ್ಕೆ ಅನುಮೋದನೆ |

| | | | |
|---|---|---|---|
| | | ಬಂಡವಾಳದ ಸಹಾಯ ಯೋಜನೆಯಡಿ ಅನುದಾನವನ್ನು ಒದಗಿಸಲು ಜಿಲ್ಲೆಯ 4 ಸಹಕಾರ ಸಂಘಗಳಿಗೆ ಗೋದಾಮು ರಿಪೇರಿ ಮಾಡಲು ರೂ.2.00ಲಕ್ಷಗಳಿಗೆ ಅನುಮೋದನೆ ನೀಡುವ ಬಗ್ಗೆ.<br>2. 2011–12ನೇ ಸಾಲಿನ ಲೆಕ್ಕಶೀರ್ಷಿಕೆ 2425–00–101–0–30 ಜಿಲ್ಲಾ ಪಂಚಾಯತ್ ಯೋಜನೆಯಡಿ ಹಾಲು ಉತ್ಪಾದನಾ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಹಾಯಧನ ಮಂಜೂರಾತಿ ಜಿಲ್ಲೆಯ 9 ಸಹಕಾರ ಸಂಘಗಳಿಗೆ ರೂ.1.50ಲಕ್ಷಗಳಿಗೆ ಅನುಮೋದನೆ ನೀಡುವ ಬಗ್ಗೆ.<br>3. 2011–12ನೇ ಸಾಲಿನ ಲೆಕ್ಕಶೀರ್ಷಿಕೆ 2425–00–101–0–28 ಜಿಲ್ಲಾ ಪಂಚಾಯತ್ ಯೋಜನೆಯಡಿ ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯಧನ/ ಎನ್.ಸಿ.ಡಿ.ಸಿ ಯೋಜನೆಯಡಿ ಅನುದಾನವನ್ನು ಒದಗಿಸಲು ಸಹಾಯಧನ ಮಂಜೂರಾತಿ ಜಿಲ್ಲೆಯ 6 ಸಹಕಾರ ಸಂಘಗಳಿಗೆ ರೂ.1.50ಲಕ್ಷಗಳಿಗೆ ಅನುಮೋದನೆ ನೀಡುವ ಬಗ್ಗೆ.<br>4. 2011–12ನೇ ಸಾಲಿನ ತಾ.ಪಂ. ಯೋಜನೆಯಡಿ ಹಂಚಿಕೆಯಾಗಿರುವ ಅನುದಾನವನ್ನು ಬೇರೆ ತಾಲ್ಲೂಕು ಪಂಚಾಯಿತಿಗೆ ವರ್ಗಾವಣೆ ಮಾಡುವ ಕುರಿತು. | ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>2. 2011–12ನೇ ಸಾಲಿನ ಲೆಕ್ಕಶೀರ್ಷಿಕೆ 2425–00–101–0–30 ಜಿಲ್ಲಾ ಪಂಚಾಯತ್ ಯೋಜನೆಯಡಿ ಲಭ್ಯವಿರುವ ರೂ.1.50ಲಕ್ಷಗಳಲ್ಲಿ ತಲಾ ರೂ17000/–ದಂತೆ ಹಾಲು ಉತ್ಪಾದನಾ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಜಿಲ್ಲೆಯ 9 ಸಹಕಾರ ಸಂಘಗಳಿಗೆ ಸಹಾಯಧನ ನೀಡುವ ಯೋಜನೆಯಡಿಯಲ್ಲಿ ಕ್ರಿಯಾ ಯೋಜನೆ ಕ್ರಮ ಸಂ: 5ರಲ್ಲಿನ ರಾಚೇನಹಳ್ಳಿ ಹಾಸನ ತಾ: ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ, ನಿ ಇದರ ಬದಲಿಗೆ ಚನ್ನರಾಯಪಟ್ಟಣ ಹೌಸಿಂಗ್ ಬೋರ್ಡ್ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಇವರಿಗೆ ನೀಡಲು ಮತ್ತು ಉಳಿದಂತೆ, ಹಾಲು ಉತ್ಪಾದನಾ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.<br>3. 2011–12ನೇ ಸಾಲಿನ ಲೆಕ್ಕಶೀರ್ಷಿಕೆ 2425–00–101–0–28 ಜಿಲ್ಲಾ ಪಂಚಾಯತ್ ಯೋಜನೆಯಡಿ ಲಭ್ಯವಿರುವ ರೂ.1.50ಲಕ್ಷಗಳಲ್ಲಿ ತಲಾ ರೂ.25000/–ದಂತೆ ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯಧನ/ ಎನ್.ಸಿ.ಡಿ.ಸಿ ಯೋಜನೆಯಡಿ 6 ಸಹಕಾರ ಸಂಘಗಳಿಗೆ ಸಹಾಯಧನವನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.<br>4. 2011–12ನೇ ಸಾಲಿನ ತಾ.ಪಂ. ಯೋಜನೆಯಡಿ ಹಂಚಿಕೆಯಾಗಿರುವ ಅನುದಾನವನ್ನು ಬೇರೆ ತಾಲ್ಲೂಕು ಪಂಚಾಯಿತಿಗೆ ಯಾವುದೇ ಸಮಸ್ಯೆ ಬಾರದೇ ಇರುವ ರೀತಿಯಲ್ಲಿ ವರ್ಗಾವಣೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 5 | ಕೈಗಾರಿಕೆ ವಿಭಾಗ (ಖಾಗ್ರಾ) ಇಲಾಖೆಯ ಪರಿಷ್ಕೃತ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಖಾಗ್ರಾ/2011–12 ದಿನಾಂಕ: 06–01–2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿರ್ದೇಶಕರು (ಖಾಗ್ರಾ), ಕೈಗಾರಿಕಾ ವಿಭಾಗ, ಹಾಸನ ಇವರು ದಿನಾಂಕ: 04–10–2011ರಲ್ಲಿನ ಅನುಮೋದಿತ ಕ್ರಿಯಾ ಯೋಜನೆಯಂತೆ ವಿಚಾರಗೋಷ್ಠಿಗಳು ಮತ್ತು ವಸ್ತುಪ್ರದರ್ಶನ ಲೆಕ್ಕಶೀರ್ಷಿಕೆ 2851–00–107–0–34 ರಡಿಯಲ್ಲಿ ಉಳಿತಾಯವಾಗುವ ರೂ.1.10ಲಕ್ಷಗಳನ್ನು ಪರಿಷ್ಕೃತ ಕ್ರಿಯಾ ಯೋಜನೆಯಂತೆ 2 ಹಿಂದುಳಿದ ತಾಲ್ಲೂಕುಗಳಲ್ಲಿ ಸಿಡಾಕ್ ತರಬೇತಿ ಸಂಸ್ಥೆ, ಧಾರವಾಡ ರವರಿಂದ ಗೃಹೋಪಯೋಗಿ ರಾಸಾಯನಿಕ ಉತ್ಪನ್ನಗಳಲ್ಲಿ 05 ದಿನಗಳ ಪ್ರಾತ್ಯಕ್ಷತಾ ತರಬೇತಿ ನೀಡಲು ರೂ. 1.00ಲಕ್ಷಗಳನ್ನು ಹಾಗೂ ವಿಚಾರ ಸಂಕೀರ್ಣ ಏರ್ಪಡಿಸಲು ರೂ.0.10ಲಕ್ಷಗಳ ಅನುದಾನವನ್ನು ವೆಚ್ಚ ಮಾಡಲು ಅನುಮೋದನೆ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪನಿರ್ದೇಶಕರು (ಖಾಗ್ರಾ), ಕೈಗಾರಿಕಾ ವಿಭಾಗ, ಹಾಸನ ಇವರು ಕೋರಿರುವಂತೆ ವಿಚಾರಗೋಷ್ಠಿಗಳು ಮತ್ತು ವಸ್ತುಪ್ರದರ್ಶನ ಲೆಕ್ಕಶೀರ್ಷಿಕೆ 2851–00–107–0–34 ರಡಿಯಲ್ಲಿ ಉಳಿತಾಯವಾಗುವ ರೂ.1.10ಲಕ್ಷಗಳನ್ನು ಪರಿಷ್ಕೃತ ಕ್ರಿಯಾ ಯೋಜನೆಯಂತೆ 2 ಹಿಂದುಳಿದ ತಾಲ್ಲೂಕುಗಳಲ್ಲಿ ಸಿಡಾಕ್ ತರಬೇತಿ ಸಂಸ್ಥೆ, ಧಾರವಾಡ ರವರಿಂದ ಗೃಹೋಪಯೋಗಿ ರಾಸಾಯನಿಕ ಉತ್ಪನ್ನಗಳಲ್ಲಿ 05 ದಿನಗಳ ಪ್ರಾತ್ಯಕ್ಷತಾ ತರಬೇತಿ ನೀಡಲು ರೂ. 1.00ಲಕ್ಷಗಳನ್ನು ಹಾಗೂ ವಿಚಾರ ಸಂಕೀರ್ಣ ಏರ್ಪಡಿಸಲು ರೂ.0.10ಲಕ್ಷಗಳ ಅನುದಾನವನ್ನು ವೆಚ್ಚ ಮಾಡಲು ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

| | | | |
|---|---|---|---|
| | ಪಶುಪಾಲನಾ ಇಲಾಖೆಯ ಆಸ್ಪತ್ರೆ ಮತ್ತು ಔಷಧಾಲಯಗಳ ಲೆಕ್ಕಶೀರ್ಷಿಕೆಯಡಿ ಪಶು ಆಸ್ಪತ್ರೆಗಳಿಗೆ ದ್ರವಸಾರಜನಕ ಪೂರೈಸುವ ಬಗ್ಗೆ ಅನುಮೋದನೆ ನೀಡುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಪಶುಪಾಲನೆ/2011-12 ದಿನಾಂಕ: 06-01-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2011-12ನೇ ಸಾಲಿಗೆ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಜಿಲಾ ಪಂಚಾಯತ್ ಕಾರ್ಯಕ್ರಮಗಳಿಗೆ ಜೀವ ರಕ್ಷಕ ಔಷಧಿಗಳನ್ನು ಉಪಕರಣ, ಪರಿಕರ ಇತ್ಯಾದಿಗಳನ್ನು ಖರೀದಿಸಲು ಈಗಾಗಲೇ ಅನುಮೋದನೆ ಪಡೆದುಕೊಳ್ಳಲಾಗಿದೆ. ದ್ರವಸಾರ ಜನಕವನ್ನು ಹಾಸನ ಹಾಲು ಒಕ್ಕೂಟವು ಪ್ರತಿ ಲೀಟರಿಗೆ ರೂ.11.00ರಂತೆ ( ತೆರಿಗೆ ಪ್ರತ್ಯೇಕ) ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದಡಿ ವಿನಾಯಿತಿ ಇರುತ್ತದೆ. ಆದ್ದರಿಂದ, 2011-12ನೇ ಸಾಲಿಗೆ 20000 ಲೀ ದ್ರವಸಾರಜನಕವನ್ನು ಖರೀದಿಸಲು ಅನುಮೋದನೆ ನೀಡುವಂತೆ ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಕೋರಿರುವಂತೆ, 2011-12ನೇ ಸಾಲಿಗೆ 20000 ಲೀ ದ್ರವಸಾರಜನಕವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯದಡಿ ವಿನಾಯಿತಿ ಹೊಂದಿರುವ ಹಾಸನ ಹಾಲು ಒಕ್ಕೂಟದಿಂದ ಪ್ರತಿ ಲೀಟರಿಗೆ ರೂ.11.00ರಂತೆ (ತೆರಿಗೆ ಪ್ರತ್ಯೇಕ) ನಿಯಮಾನುಸಾರ 2403-00-101-0-27 ಆಸ್ಪತ್ರೆ ಮತ್ತು ಔಷಧಗಳು ಲೆಕ್ಕಶೀರ್ಷಿಕೆಯಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 7 | ಸಾಮಾಜಿಕ ಅರಣ್ಯ ವಿಭಾಗದ ಇಲಾಖೆಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಸಾ.ಅರಣ್ಯ/2011-12 ದಿನಾಂಕ: 06-01-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಕೆಳಕಂಡಂತೆ ಪ್ರಸ್ತಾವನೆಗಳನ್ನು ಸಲ್ಲಿಸಿ ಅನುಮೋದನೆ ನೀಡುವಂತೆ ಕೋರಿರುತ್ತಾರೆ.<br>1. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ಹಾಸನ ಇವರ ಕಛೇರಿಗೆ Leather Chair with wooden base aamd Leather visitors chair with wooden ಗಳನ್ನು ಖರೀದಿಸಲು ಅನುಮೋದನೆ ನೀಡುವ ಬಗ್ಗೆ.<br>2. ಸಹಾಯಕ ಅರಣ್ಯ ಸಂರಕ್ಷಣಾಧಿಕರಿಗಳ ಕಚೇರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ಹಾಸನ ಇವರ ಕಛೇರಿಗೆ Chamber Wooden Screen ಗಳನ್ನು ಖರೀದಿಸಲು ಅನುಮೋದನೆ ನೀಡುವ ಬಗ್ಗೆ.<br>3. ವಲಯ ಅರಣ್ಯಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಲಯ, ಹೊಳೆನರಸೀಪುರ ಇಲ್ಲಿಗೆ ಕಟ್ಟಡ ಯೋಜನೆಯಡಿ ಅರಕಲಗೂಡು ಸಾಮಾಜಿಕ ಅರಣ್ಯ ವಲಯ ಕಚೇರಿ ನಿರ್ಮಾಣಕ್ಕೆ ನಿವೇಶನ ಮಂಜೂರಾತಿಯಾಗದ ಕಾರಣ ಹೊಳೆನರಸೀಪುರ ತಾಲ್ಲೂಕಿನ ಅರಣ್ಯ ಸಂಕೀರ್ಣದಲ್ಲಿರುವ ಸ್ಥಳದಲ್ಲಿ ಲಭ್ಯವಿರುವ ಅನುದಾನದಲ್ಲಿ ಹೊಳೆನರಸೀಪುರ ಸಾಮಾಜಿಕ ಅರಣ್ಯ ವಲಯ ಕಛೇರಿಯ ಕಟ್ಟಡ ನಿರ್ಮಾಣ ಮಾಡಲು ಅನುಮೋದನೆ ನೀಡುವ ಬಗ್ಗೆ.<br>4. ವಲಯ ಅರಣ್ಯಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಲಯ, | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಸಲ್ಲಿಸಿರುವ ಪ್ರಸ್ತಾವನೆಗಳಿಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಲು ನಿರ್ಣಯಿಸಲಾಯಿತು.<br>1. ಸಹಾಯಕ ಅರಣ್ಯ ಸಂರಕ್ಷಣಾಧಿಕರಿಗಳ ಕಚೇರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ಹಾಸನ ಇವರ ಕಛೇರಿಗೆ Leather Chair with wooden base aamd Leather visitors chair with wooden ಗಳನ್ನು ರೂ.34650.00ರಂತೆ ಆಹ್ವಾನಿತ ದರಪಟ್ಟಿಗಳಲ್ಲಿ ಅತ್ಯಂತ ಕಡಿಮೆ ದರ ನಮೂದಿಸಿರುವ ಪಾನ್ ಆಫೀಸ್ ಸಿಸ್ಟಮ್ಸ್ ಪ್ರೈ ಲಿಮಿಟೆಡ್, ಬೆಂಗಳೂರು ಇವರಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಆಡಳಿತ ವೆಚ್ಚಕ್ಕೆ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಅನುಮತಿ ನೀಡಲಾಯಿತು.<br>2. ಸಹಾಯಕ ಅರಣ್ಯ ಸಂರಕ್ಷಣಾಧಿಕರಿಗಳ ಕಚೇರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ಹಾಸನ ಇವರ ಕಛೇರಿಗೆ Chamber Wooden Screen ಸಂಖ್ಯೆ: 2ಗಳನ್ನು ತಲಾ ಒಂದಕ್ಕೆ ರೂ.15750.00ರಂತೆ ಆಹ್ವಾನಿತ ದರಪಟ್ಟಿಗಳಲ್ಲಿ ಅತ್ಯಂತ ಕಡಿಮೆ ದರ ನಮೂದಿಸಿರುವ ಜಿಬಿ ಹ್ಯಾಂಡಿಕ್ರಾಫ್ಟ್ ಎಕ್ಸ್‌ಪೋರ್ಟ್, ಮೈಸೂರು ಇವರಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಆಡಳಿತ ವೆಚ್ಚಕ್ಕೆ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಅನುಮತಿ ನೀಡಲಾಯಿತು. |

46

| | | | |
|---|---|---|---|
| | | ಹೊಳೆನರಸೀಪುರ ಇಲ್ಲಿನ ಶ್ರವಣೂರು ಸಸ್ಯಕ್ಷೇತ್ರಕ್ಕೆ 8 ಹೆಚ್.ಪಿ.ಡೀಸೆಲ್ ಪಂಪ್‌ಸೆಟ್ (ಕಿರ್ಲೋಸ್ಕರ್) ಖರೀದಿಗೆ ಅನುಮೋದನೆ ನೀಡುವ ಬಗ್ಗೆ. | 3. 2011–12ನೇ ಸಾಲಿನ ಲೆಕ್ಕಶೀರ್ಷಿಕೆ 2406–00–101–0–28, ಕಟ್ಟಡಗಳು ಯೋಜನೆಯಡಿಯಲ್ಲಿ ಅರಕಲಗೂಡು ತಾಲ್ಲೂಕು ಸಾಮಾಜಿಕ ಅರಣ್ಯ ವಲಯದ ವಲಯ ಅರಣ್ಯಾಧಿಕಾರಿಗಳ ಕಛೇರಿ, ಕಟ್ಟಡವನ್ನು ಅರಕಲಗೂಡು, ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ನಿರ್ಮಿಸಲು ಅವಶ್ಯ ನಿವೇಶನವನ್ನು ನೀಡುವ ಬಗ್ಗೆ ತಾಲ್ಲೂಕು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯ ಮಾಡಿ ನಿವೇಶನ ನೀಡಲು ಕ್ರಮ ವಹಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ತಿಳಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.<br>4. ವಲಯ ಅರಣ್ಯಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಲಯ, ಹೊಳೆನರಸೀಪುರ ಇಲ್ಲಿನ ಶ್ರವಣೂರು ಸಸ್ಯಕ್ಷೇತ್ರಕ್ಕೆ 8 ಹೆಚ್.ಪಿ.ಡೀಸೆಲ್ ಪಂಪ್‌ಸೆಟ್ (ಕಿರ್ಲೋಸ್ಕರ್) ಅನ್ನು ರೂ.50000.00ರಂತೆ ಅತ್ಯಂತ ಆಹ್ವಾನಿತ ದರಪಟ್ಟಿಗಳಲ್ಲಿ ಕಡಿಮೆ ದರ ನಮೂದಿಸಿರುವ ವಾಟರ್ ಜೇಟ್ ಇಂಜಿನಿಯರ್ಸ್ ಅಂಡ್ ಕಂ. ಚಂದನ ಕಾಂಪ್ಲೆಕ್ಸ್, ಹರ್ಷ ಮಹಲ್ ರಸ್ತೆ, ಹಾಸನ ಇವರಿಂದ ಇವರಿಂದ ಸಾಮಾಜಿಕ ಅರಣ್ಯ ವಿಭಾಗದ 2011–12ನೇ ಸಾಲಿನ ಲೆಕ್ಕಶೀರ್ಷಿಕೆಯಡಿ 2406–00–1–101–0–26ರಡಿ ಲಭ್ಯವಿರುವ ಅನುದಾನದಲ್ಲಿ ಖರೀದಿಸಲು ನಿಯಮಾನುಸಾರ ನಿರ್ಣಯಿಸಲಾಯಿತು. |
| 8 | ಮೀನುಗಾರಿಕೆ ಇಲಾಖೆಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ:ಜಿಪಂಹಾ/ಅಭಿ(3)ಮೀನುಗಾರಿಕೆ/2011–12 ದಿನಾಂಕ: 07–01–2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2011–12ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿ ಯೋಜನೆಯಡ ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯ (2405–00–101–0–30) ಯೋಜನೆಯಡಿ ನಿಗದಿಪಡಿಸಲಾದ ಗುರಿಯಂತೆ ಮೀನು ಮಾರಾಟ ಸಲಕರಣೆಗಳನ್ನು ಖರೀದಿಸಲು ಸಹಾಯಧನ ನೀಡಲು ಆಯ್ಕೆಯಾಗಿರುವ ಒಟ್ಟು 14 ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡುವಂತೆ ಫಲಾನುಭವಿ ಪಟ್ಟಿ ಮತ್ತು ನೀಡಲಾಗುವ ಸಹಾಯಧನದ ವಿವರಗಳನ್ನು ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಹಾಸನ ಇವರು ಸಭೆಯಲ್ಲಿ ಮಂಡಿಸಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಹಿರಿಯ ಸಹಾಯಕ ಮೀನುಗಾರಿಕಾ ನಿರ್ದೇಶಕರು, ಹಾಸನ ಇವರು ಕೋರಿರುವಂತೆ 2011–12ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿ ಯೋಜನೆಯಡಿ ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯ (2405–00–101–0–30) ಯೋಜನೆಯಡಿ ನಿಗದಿಪಡಿಸಲಾದ ಗುರಿಯಂತೆ ಮೀನು ಮಾರಾಟ ಸಲಕರಣೆಗಳನ್ನು ಖರೀದಿಸಲು ಸಹಾಯಧನ ನೀಡಲು ಆಯ್ಕೆಯಾಗಿರುವ ಒಟ್ಟು 14 ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 9 | ಮೀನುಮಾರಾಟ ಮಳಿಗೆಗಳನ್ನು ಬಾಡಿಗೆಗೆ ಅಥವಾ ಹರಾಜು ಮಾಡುವ ಬಗ್ಗೆ. | ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಮಾತನಾಡುತ್ತಾ, ಮೀನು ಮಾರಾಟ ಮಳಿಗೆ (ಕಿಯಾಸ್ಕ) ಗಳನ್ನು ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಹಾಸನ ಜಿಲ್ಲೆಯ ಅರಕಲಗೂಡು /ಅರಸೀಕೆರೆ/ಹಾಸನ/ಸಕಲೇಶಪುರ/ ಬೇಲೂರು ತಾಲ್ಲೂಕುಗಳಲ್ಲಿ ನಿರ್ಮಿಸಿದ್ದು, ಈ ಮೀನು ಮಾರಾಟ ಮಳಿಗೆ ಅಂದರೆ ಕಿಯಾಸ್ಕಗಳನ್ನು ಸ್ಥಾಪಿಸಿ ಮೀನು ಮಾರಾಟಕ್ಕಾಗಿ ಬಾಡಿಗೆ ರೂಪದಲ್ಲಿ ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾ ಮಂಡಳಿ (ನಿ) ಮೈಸೂರು ಇವರಿಗೆ ನೀಡಲಾಗಿತ್ತು. ಆದರೆ, ಈಗ ಮೀನು ಮಾರಾಟ ಮಳಿಗೆಗಳಿಗೆ ನಿಗದಿಪಡಿಸಿದ್ದ, ಬಾಡಿಗೆಯನ್ನು ಕರ್ನಾಟಕ | ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಹಾಸನ ಇವರು ಮಂಡಿಸಿರುವ ಈ ವಿಷಯವನ್ನು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಈಗ ಸಧ್ಯಕ್ಕೆ ಅರಸೀಕೆರೆಯಲ್ಲಿರುವ ಕಿಯಾಸ್ಕವನ್ನು ಮಾಸಿಕ ಬಡಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಮುಂದೆ ಬಂದಿರುವಂತಹ ಶ್ರೀಯುತ ಮಂಜೇಗೌಡ ಬಿನ್ ಮರಿಗೌಡ, ಹರಪನಹಳ್ಳಿ, ಅರಸೀಕೆರೆ ತಾ: ಇವರಿಗೆ ಮಾಸಿಕ ರೂ.300/–(ರೂಪಾಯಿ ಮುನ್ನೂರು ಮಾತ್ರ)ಗಳಂತೆ ನಿಗದಿಪಡಿಸಿ ಇತರೆ ಷರತ್ತು ಮತ್ತು ನಿಬಂಧನೆಗಳೊಂದಿಗೆ ನೀಡುವಂತೆ ಸಭೆಯಲ್ಲಿ ಅನುಮತಿ ನೀಡಲಾಯಿತು. |

| | | | |
|---|---|---|---|
| | | ಸಹಕಾರಿ ಮೀನುಗಾರಿಕೆ ಮಹಾ ಮಂಡಳಿ ಕಾರಣಾಂತರಗಳಿಂದ ನೀಡಿದರೂ ಸರಿಯಾಗಿ ಬಾಡಿಗೆ ನೀಡದೇ ಬಾಕಿ ಉಳಿಸಿಕೊಂಡಿರುತ್ತಾರೆ. ಆದ್ದರಿಂದ, ಈ ಮೀನು ಮರಿ ಮಾರಾಟ ಮಳಿಗೆಗಳು ತುಂಬಾ ಹಳೆಯದಾಗಿದ್ದು, ಸುವ್ಯವಸ್ಥೆ ಇಲ್ಲದೇ ಇರುವುದರಿಂದ, ಈ ಮಳಿಗೆಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಿ ಅದರಿಂದ ಬಂದ ಆದಾಯವನ್ನು ಸರ್ಕಾರಕ್ಕೆ ಜಮಾ ಮಾಡಲು ಅನುಮತಿ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.<br>ಮಾನ್ಯ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳು ಮಾಸಿಕವಾಗಿ ಕಡಿಮೆ ದರದಲ್ಲಿ ಬಾಡಿಗೆಯನ್ನು ನಿಗದಿಪಡಿಸಿ ಮೀನು ಮಾರಾಟ ಮಾಡಲು ನೀಡಲು ಕ್ರಮ ವಹಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. | |
| 10 | 1992-93ನೇ ಸಾಲಿನಲ್ಲಿ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಸಕಲೇಶಪುರ ಮೀನುಮರಿ ಪಾಲನಾ ಕೇಂದ್ರಕ್ಕೆ ನೀಡಿದ್ದ ಅನುದಾನದಲ್ಲಿ ಬಾಕಿ ಇರುವ ರೂ.29,781/-ಗಳನ್ನು ಸರ್ಕಾರಕ್ಕೆ ಜಮಾ ಮಾಡುವುದು ಅಥವಾ ಅದೇ ಕೇಂದ್ರದಲ್ಲಿನ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ವಿನಿಯೋಗಿಸಲು ಅನುಮೋದನೆ ನೀಡುವ ಬಗ್ಗೆ. | ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, 1992-93ನೇ ಸಾಲಿನಲ್ಲಿ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಸಕಲೇಶಪುರ ಮೀನುಮರಿ ಪಾಲನಾ ಕೇಂದ್ರದ ನಿರ್ಮಾಣಕ್ಕಾಗಿ ನೀಡಲಾಗಿದ್ದ ಅನುದಾನದಲ್ಲಿ ರೂ.29,781/-ಗಳು ಬಾಕಿ ಉಳಿದಿದ್ದು, ಸದರಿ ಅನದಾನವನ್ನು ಸರ್ಕಾರಕ್ಕೆ ಜಮಾ ಮಾಡಲು ಅನುಮತಿ ನೀಡುವಂತೆ ಕೋರಿರುತ್ತಾರೆ. | ಸಭೆಯಲ್ಲಿ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಮಂಡಿಸಿರುವ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. 1992-93ನೇ ಸಾಲಿನಲ್ಲಿ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಸಕಲೇಶಪುರ ಮೀನುಮರಿ ಪಾಲನಾ ಕೇಂದ್ರದ ನಿರ್ಮಾಣಕ್ಕಾಗಿ ನೀಡಲಾಗಿದ್ದ ಅನುದಾನದಲ್ಲಿ ಉಳಿಕೆಯಾಗಿರುವ ರೂ.29,781/-(ರೂಪಾಯಿ ಇಪ್ಪತ್ತೊಂಬತ್ತು ಸಾವಿರದ ಏಳುನೂರ ಎಂಬತ್ತೊಂದು ಮಾತ್ರ)ಗಳನ್ನು ಸರ್ಕಾರಕ್ಕೆ ಜಮಾ ಮಾಡುವ ಬದಲಿಗೆ ಅದೇ ಕೇಂದ್ರದಲ್ಲಿ ಈಗ ಅಗಬೇಕಾಗಿರುವ ಇತರೆ ಅಭಿವೃದ್ಧಿ ಕೆಲಸಗಳಿಗೆ ರೂ.29,781/-ಗಳ ಜೊತೆಗೆ ಇದರ ಮೇಲೆ ಈತನಕ ಬಂದಿರುವ ಬಡ್ಡಿ ಹಣವನ್ನು ವಿನಿಯೋಗಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 10 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. |
| 1 | ಪಶುಪಾಲನಾ ಇಲಾಖೆಯ ವಿಸ್ತರಣಾ ಘಟಕ ಬಲಪಡಿಸುವುದು ಯೋಜನೆಯಡಿ ಉಪ | ಉಪ ನಿರ್ದೇಶಕರು, ಪಶುಪಾಲನಾ ಇಲಾಖೆರವರು ತಮ್ಮ ಪತ್ರ ದಿನಾಂಕ: 07-01-2012ರಲ್ಲಿ ಹಾಸನ ಜಿಲ್ಲೆಯ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ 2011-12ನೇ ಸಾಲಿನ ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳ ಕ್ರಿಯಾ ಯೋಜನೆಯಡಿ ವಿಸ್ತರಣ ಘಟಕ | ಉಪ ನಿರ್ದೇಶಕರು, ಪಶುಪಾಲನಾ ಇಲಾಖೆರವರು ಕೋರಿರುವಂತೆ 2011-12ನೇ ಸಾಲಿನ ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳ ಕ್ರಿಯಾ ಯೋಜನೆಯಡಿ ವಿಸ್ತರಣ ಘಟಕ ಬಲಪಡಿಸುವುದು ಕಾರ್ಯಕ್ರಮಗಳಲ್ಲಿ ಕಂಪ್ಯೂಟರ್ ಪೂರೈಸಲು |

47

| | | | |
|---|---|---|---|
| | ನಿರ್ದೇಶಕರ ಕಛೇರಿಗೆ ಒಂದು ಲ್ಯಾಪ್ ಟ್ಯಾಪ್ ಖರೀದಿಸುವ ಬಗ್ಗೆ. | ಬಲಪಡಿಸುವುದು ಕಾರ್ಯಕ್ರಮಗಳಲ್ಲಿ ಕಂಪ್ಯೂಟರ್ ಪೂರೈಸಲು ಅವಕಾಶ ಮಾಡಿಕೊಳ್ಳಲಾಗಿದೆ. ಉಪ ನಿರ್ದೇಶಕರ ಕಛೇರಿಗೆ ದತ್ತಾಂಶಗಳು, ಮಾಹಿತಿಗಳನ್ನು ಕಲೆಹಾಕಲು ಹಾಗೂ ಕಛೇರಿ ಕೆಲಸಕ್ಕೆ ಒಂದು ಲ್ಯಾಪ್‌ಟ್ಯಾಪ್ ಅತಿ ತುರ್ತಾಗಿ ಅವಶ್ಯವಿದ್ದು, ರೂ.45000/- ರ ಮೌಲ್ಯದಲ್ಲಿ ಖರೀದಿಸಲು ಅನುಮತಿ ನೀಡುವಂತೆ ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಿದರು. | ಅವಕಾಶ ಮಾಡಿಕೊಂಡಿರುವಂತೆ ಉಪ ನಿರ್ದೇಶಕರ ಕಛೇರಿಗೆ ದತ್ತಾಂಶಗಳು, ಮಾಹಿತಿಗಳನ್ನು ಕಲೆಹಾಕಲು ಹಾಗೂ ಕಛೇರಿ ಕೆಲಸಕ್ಕೆ ಒಂದು ಲ್ಯಾಪ್‌ಟ್ಯಾಪ್ ಅನ್ನು ರೂ.45000/-(ರೂಪಾಯಿ ನಲವತ್ತೈದು ಸಾವಿರ ಮಾತ್ರ)ಗಳಲ್ಲಿ ಕೊಟೇಷನ್ ಅಥವಾ ಡಿ.ಜಿ.ಎಸ್ ಅಂಡ್ ಡಿ ದರದಲ್ಲಿ ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 2 | ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಚಿಕ್ಕಕಡಲೂರು ಸಂಸ್ಥೆಯ ಸೌಲಭ್ಯವನ್ನು ಪಶುವೈದ್ಯ ಕೀಯ ಕಾಲೇಜಿನ ವಿದ್ಯಾರ್ಥಿಗಳ ಭೋದನೆಗಾಗಿ ನೀಡುವ ಬಗ್ಗೆ. | ಉಪ ನಿರ್ದೇಶಕರು, ಪಶುಪಾಲನಾ ಇಲಾಖೆರವರು ತಮ್ಮ ಪತ್ರ ದಿನಾಂಕ: 07-01-2012ರಲ್ಲಿ ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ ಇವರು ಹಾಸನ ತಾಲ್ಲೂಕಿನ ಚಿಕ್ಕಕಡಲೂರು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಇಲ್ಲಿನ ಚಿಕಿತ್ಸಾ ಸೌಲಭ್ಯಗಳನ್ನು ಸದರಿ ಕಾಲೇಜಿನ ವಿದ್ಯಾರ್ಥಿಗಳ ಭೋದನೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಅನುಮತಿ ನೀಡುವಂತೆ ಕೋರಿರುತ್ತಾರೆ. ಆದ್ದರಿಂದ, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರದ ಸೌಲಭ್ಯಗಳನ್ನು ನೀಡಿದಲ್ಲಿ ಪರಿಣಿತ ವೈದ್ಯರಾದ ಶಿಕ್ಷಕರು ಚಿಕಿತ್ಸಾ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ಭೋದಿಸುವುದರಿಂದ, ರೈತ ಸಮುದಾಯಕ್ಕೆ ಹೆಚ್ಚಿನ ಅನುಕೂಲವಾಗುವುದು. ಆದ್ದರಿಂದ ಚಿಕ್ಕಕಡಲೂರು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಇಲ್ಲಿನ ಚಿಕಿತ್ಸಾ ಕಾಲೇಜಿನ ವಿದ್ಯಾರ್ಥಿಗಳಿಗೆ ಭೋದನೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಅನುಮತಿ ನೀಡುವಂತೆ ಉಪ ನಿರ್ದೇಶಕರು, ಪಶುಪಾಲನೆ ಇಲಾಖೆ, ಹಾಸನ ಇವರು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಕೋರಿರುವಂತೆ ಹಾಸನ ತಾಲ್ಲೂಕಿನ ಚಿಕ್ಕಕಡಲೂರು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಇಲ್ಲಿನ ಚಿಕಿತ್ಸಾ ಸೌಲಭ್ಯಗಳನ್ನು ಸದರಿ ಕಾಲೇಜಿನ ವಿದ್ಯಾರ್ಥಿಗಳ ಭೋದನೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಅನುಮತಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಾಯಿತು. |
| 3 | ಡಿಸೆಂಬರ್ 23 ರಂದು ರೈತ ದಿನಾಚರಣೆ ಆಚರಿಸುವ ಬಗ್ಗೆ. | ಮಾನ್ಯ ಉಪಾಧ್ಯಕ್ಷರಾದ ಶ್ರೀಮತಿ ಸುಲೋಚನಾ ರಾಮಕೃಷ್ಣರವರು ಮನವಿಯನ್ನು ಸಲ್ಲಿಸಿ ದಿನಾಂಕ: 23-12-2011ರಂದು ಅರಕಲಗೂಡು ತಾಲ್ಲೂಕಿನಲ್ಲಿ ರೈತ ದಿನಾಚರಣೆ ಕಾರ್ಯಕ್ರಮ ಆಚರಿಸಿದ್ದು, ಈ ಸಮಾರಂಭಕ್ಕೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು/ಉಪಾಧ್ಯಕ್ಷರನ್ನು ಆಹ್ವಾನಿಸಿದ್ದು, ಕಾರ್ಯಕ್ರಮ ಬಹಳ ಯಶಸ್ವಿಯಾಗಿ ನಡೆಯಿತು. ಆ ಸಮಾರಂಭದಲ್ಲಿ ದಿವಂಗತ ಮಾಜಿ ಪ್ರಧಾನಿಗಳಾದ ಚರಣ್ ಂಗ್‌ರವರ ದಿನವನ್ನು ರೈತರ ದಿನವನ್ನಾಗಿ ವಿಶ್ವವಿದ್ಯಾನಿಲಯಗಳಲ್ಲಿ ಮಾತ್ರ ಆಚರಿಸುತ್ತಿದ್ದಾರೆ. ಶೇ.75ರಷ್ಟು ಬಾಗ ರೈತರು ಕೃಷಿ ಅವಲಂಬಿಸಿರುವುದರಿಂದ, ಈ ಒಂದು ದಿನವನ್ನು ರೈತರ ದಿನವನ್ನಾಗಿ ಸರ್ಕಾರ ಅಚರಣೆ ಮಾಡುವಂತೆ ಮನವಿ ಮಾಡಿರುತ್ತಾರೆ. ಆದ್ದರಿಂದ, ಈ ಬಗ್ಗೆ ಸರ್ಕಾರಕ್ಕೆ ಒತ್ತಡ ತರಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಲಾಯಿತು.<br>ಪ್ರತಿ ವರ್ಷ ಡಿಸೆಂಬರ್ 23ರಂದು ದಿವಂಗತ ಮಾಜಿ ಪ್ರಧಾನಿಗಳಾದ ಚರಣ್‌ಸಿಂಗ್‌ರವರ ದಿನವನ್ನು ರೈತರ ದಿನವನ್ನಾಗಿ ಕೇವಲ ವಿಶ್ವವಿದ್ಯಾನಿಲಯಗಳಲ್ಲಿ ಮಾತ್ರ ಆಚರಿಸುತ್ತಿದ್ದಾರೆ. ಶೇ.75ರಷ್ಟು ಭಾಗ ರೈತರು ಕೃಷಿ ಅವಲಂಬಿಸಿರುವುದರಿಂದ, ಈ ಒಂದು ದಿನವನ್ನು ರೈತರ ದಿನವನ್ನಾಗಿ ಅಚರಣೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

| | | | |
|---|---|---|---|
| | ಸಕಲೇಶಪುರ ತಾ: ಬಾಗೆ ನರ್ಸರಿಯಲ್ಲಿ ಎಂ.ಜಿ.ಎನ್ .ಆರ್.ಇ.ಜಿ. ಅಡಿಯಲ್ಲಿ ಬೆಳೆಸಿ ಉಳಿಕೆಯಾಗಿರುವ ಅಡಿಕೆ ಸಸಿಗಳನ್ನುಬೇರೆ ತಾಲ್ಲೂಕಿಗೆ ವರ್ಗಾವಣೆ ಮಾಡುವ ಬಗ್ಗೆ. | ಮಾನ್ಯ ಉಪಾಧ್ಯಕ್ಷರಾದ ಶ್ರೀಮತಿ ಸುಲೋಚನಾ ರಾಮಕೃಷ್ಣರವರು ಮನವಿಯನ್ನು ಸಲ್ಲಿಸಿ ದಿನಾಂಕ: 05-01-2012ರಂದು ಸಹಾಯಕ ನಿರ್ದೇಶಕರ ಕಛೇರಿ, ತೋಟಗಾರಿಕೆ ಇಲಾಖೆ, ಸಕಲೇಶಪುರ ತಾ: ಇಲ್ಲಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ 2011-12ನೇ ಸಾಲಿಗೆ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿಯಲ್ಲಿ ಸುಮಾರು 30000 ಅಡಿಕೆ ಸಸಿಗಳನ್ನು ಬೆಳೆದಿದ್ದು, ಇವುಗಳಲ್ಲಿ 5525 ಗಿಡಗಳನ್ನು 6 ಗ್ರಾಮ ಪಂಚಾಯಿತಿಗಳಿಂದ ಮಾತ್ರ ಪಡೆದಿದ್ದು, ಉಳಿದ ಸಸಿಗಳು ಬಾಕಿಯಿರುತ್ತವೆ. ಈ ಬಗ್ಗೆ ಹಲವಾರು ಬಾರಿ ಉಳಿದ ಗ್ರಾಮ ಪಂಚಾಯಿತಿಗಳಿಗೆ ಸಸಿಗಳನ್ನು ತೆಗೆದುಕೊಂಡು ಹೋಗುವಂತೆ ತಿಳಿಸಿದ್ದರೂ ಸಹ ಯಾವ ಪಂಚಾಯಿತಿಯಿಂದಲೂ ಸಸಿಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ. ಆದ್ದರಿಂದ, ಉಳಿಕೆಯಾಗಿರುವ ಸಸಿಗಳನ್ನು ಬೇಡಿಕೆಯಿರುವ ಬೇರೆ ತಾಲ್ಲೂಕುಗಳಿಗೆ ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>2011-12ನೇ ಸಾಲಿಗೆ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿಯಲ್ಲಿ ಸಕಲೇಶಪುರ ತಾ: ಬಾಗೆ ಗ್ರಾಮದ ನರ್ಸರಿಯಲ್ಲಿ ಬೆಳೆಸಿರುವ 30000 ಅಡಿಕೆ ಸಸಿಗಳಲ್ಲಿ ವಿತರಣೆಯಾಗದೆ ಬಾಕಿ ಉಳಿದಿರುವ ಸಸಿಗಳನ್ನು ಬೇಡಿಕೆಯಿರುವ ಬೇರೆ ತಾಲ್ಲೂಕುಗಳಿಗೆ ಬದಲಾವಣೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 5 | ಸಹಾಯಕ ನಿರ್ದೇಶಕರು, ಪಶುಪಾಲನಾ ಇಲಾಖೆ, ಅರಕಲಗೂಡು ಇಲ್ಲಿಗೆ ಬಾಡಿಗೆ ಆಧಾರದ ಮೇಲೆ ವಾಹನವನ್ನು ಪಡೆಯುವ ಬಗ್ಗೆ. | ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಮಾತನಾಡುತ್ತಾ, ಸಹಾಯಕ ನಿರ್ದೇಶಕರು, ಪಶುಪಾಲನಾ ಇಲಾಖೆ, ಅರಕಲಗೂಡು ಇವರಿಗೆ ವಾಹನ ಸೌಲಭ್ಯವಿಲ್ಲದೆ ಪಶುಚಿಕಿತ್ಸಾ ಕೇಂದ್ರಗಳಿಗೆ ಸಂಚರಿಸಿ ಪರಿಶೀಲಿಸಲು ಮತ್ತು ಔಷದಿ/ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ, ಬಾಡಿಗೆ ಆಧಾರದ ಮೇಲೆ ವಾಹನವನ್ನು ಪಡೆಯಲು ಮತ್ತು ಇದಕ್ಕೆ ತಗಲುವ ವೆಚ್ಚವನ್ನು ಆರ್.ಕೆ.ವಿ.ವೈ/ ಆಡಳಿತ ವೆಚ್ಚಕ್ಕೆ ಬಿಡುಗಡೆ ಯಾಗುವ ಬಿಡುಗಡೆ ಮಾಡುವ ಅನುದಾನದಲ್ಲಿ ಮಾಹೆಯಾನ ರೂ.21000/-ಗಳ ಮಿತಿಯಲ್ಲಿ ಬಾಡಿಗೆಯನ್ನು ಪಾವತಿಸಿ ವಾಹನವನ್ನು ಪಡೆಯುವಂತೆ ಈಗಾಗಲೇ ತಿಳಿಸಿರುತ್ತಾರೆ. ಆದ್ದರಿಂದ, ವಾಹನವನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಅನುಮತಿ ನೀಡಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಕೋರಿರುವಂತೆ, ಸಹಾಯಕ ನಿರ್ದೇಶಕರು, ಅರಕಲಗೂಡು ಇವರಿಗೆ ಅವಶ್ಯವಿರುವ ವಾಹನವನ್ನು ಸರ್ಕಾರಿ ನಿಯಮಾನುಸಾರ ಮಾಸಿಕ ರೂ.21000/-(ರೂಪಾಯಿ ಇಪ್ಪತ್ತೊಂದು ಸಾವಿರ ಮಾತ್ರ)ಗಳ ಮಾಹೆಯಾನ ಬಾಡಿಗೆ ಆಧಾರದ ಮೇಲೆ ಪಡೆಯಲು ಅಗತ್ಯ ಕ್ರಮ ವಹಿಸುವಂತೆ ಉಪ ನಿರ್ದೇಶಕರು ಪಶುಪಾಲನಾ ಇಲಾಖೆರವರಿಗೆ ತಿಳಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಇದಕ್ಕೆ ತಗಲುವ ವೆಚ್ಚವನ್ನು ಆರ್.ಕೆ.ವಿ.ವೈ/ ಆಡಳಿತ ವೆಚ್ಚಕ್ಕೆ ಬಿಡುಗಡೆಯಾಗುವ ಬಿಡುಗಡೆ ಮಾಡುವ ಅನುದಾನದಲ್ಲಿ ಭರಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು. |
| 6 | ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರಿಗೆ ಬಾಡಿಗೆ ಆಧಾರದ ಮೇಲೆ ವಾಹನವನ್ನು ಪಡೆಯಲು ಅನುಮತಿ ನೀಡುವ ಬಗ್ಗೆ. | ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಮಾತನಾಡುತ್ತಾ, ಇಲಾಖೆಯಲ್ಲಿ ಸ್ವಂತ ವಾಹನ ಇಲ್ಲದಿರುವುದರಿಂದ, ಪ್ರವಾಸ ಮಾಡಿ ಪರಿಶೀಲನೆ ನಡೆಸಲು ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ, ಮಾಹೆಯಾನ ಬಾಡಿಗೆ ಆಧಾರದ ಮೇಲೆ ವಾಹನವನ್ನು ಪಡೆಯಲು ಅನುಮತಿ ನೀಡುವಂತೆ ಸಭೆಯಲ್ಲಿ ವಿಷಯವನ್ನು ಮಂಡಿಸಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಕೋರಿರುವಂತೆ ಇಲಾಖಾ ಕೆಲಸ ಕಾರ್ಯಗಳಿಗೆ ಮತ್ತು ಅಧೀನ ಕಛೇರಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲು ಅನುಕೂಲವಾಗುವಂತೆ ಸರ್ಕಾರಿ ನಿಯಮಾನುಸಾರ ರೂ.20000/-(ರೂಪಾಯಿ ಇಪ್ಪತ್ತು ಸಾವಿರ ಮಾತ್ರ)ಗಳ ಮಾಹೆಯಾನ ಬಾಡಿಗೆ ಆಧಾರದ ಮೇಲೆ ವಾಹನವನ್ನು ಪಡೆಯಲು ಸಭೆಯಲ್ಲಿ ಸರ್ವಾನುಮತದಿಂದ ಅನುಮತಿ ನೀಡಿ ನಿರ್ಣಯಿಸಲಾಯಿತು. ಹಾಗೂ ಸದರಿ ವಾಹನ ಬಾಡಿಗೆಗೆ ತಗಲುವ ವೆಚ್ಚವನ್ನು |

968

| | | | |
|---|---|---|---|
| | | | ವಾರ್ಷಿಕ ಆಡಳಿತ ವೆಚ್ಚಕ್ಕೆ ಬಿಡುಗಡೆಯಾಗುವ ಅನುದಾನದಲ್ಲಿ ಭರಿಸಲು ಅನುಮತಿ ನೀಡಿ ನಿರ್ಣಯಿಸಲಾಯಿತು. |
| 7 | 2011-12ನೇ ಸಾಲಿನ ಜಿಲ್ಲಾ ಔದ್ಯಮಿಕ ಕೇಂದ್ರಗಳು ಯೋಜನೆಯಡಿಯಲ್ಲಿ ಹೊಲಿಗೆ ಯಂತ್ರಗಳನ್ನು ನೀಡಲು ಸಿದ್ದಪಡಿಸಿರುವ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ. | ಉಪ ನಿರ್ದೇಶಕರು(ಖಾಗ್ರಾ) ಕೈಗಾರಿಕಾ ಇಲಾಖೆ, (ಜಿ.ಪಂ.) ಹಾಸನ ಇವರು ಮಾತನಾಡುತ್ತಾ, 2011-12ನೇ ಸಾಲಿನ ಜಿಲ್ಲಾ ಔದ್ಯಮಿಕ ಕೇಂದ್ರಗಳು ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ಸರಬರಾಜು ಮಾಡಲು ಫಲಾನುಭವಿಗಳ ಪಟ್ಟಿಯನ್ನು ಸಿದ್ದಪಡಿಸಿ ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು (ಖಾಗ್ರಾ) ಕೈಗಾರಿಕಾ ಇಲಾಖೆ (ಜಿಪಂ), ಹಾಸನ ಇವರು ಕೋರಿರುವಂತೆ 2011-12ನೇ ಸಾಲಿನ ಜಿಲ್ಲಾ ಔದ್ಯಮಿಕ ಕೇಂದ್ರಗಳು ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ಸರಬರಾಜು ಮಾಡಲು ಸಿದ್ದಪಡಿಸಿ ಸಲ್ಲಿಸಿರುವ ಅರ್ಹ ಫಲಾನುಭವಿಗಳ ಪಟ್ಟಿಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಲು ನಿರ್ಣಯಿಸಲಾಯಿತು. |
| 8 | ಗೊರೂರು ಜಲಾಶಯ ದಲ್ಲಿರುವ ಮೀನುಮರಿ ಸಾಕಾಣಿಕೇಂದ್ರ ಮತ್ತ ಅದರ ಸುತ್ತಮುತ್ತಲಿನ ಪ್ರದೇಶವನ್ನು ಅಭಿವೃದ್ದಿಪಡಿಸುವ ಬಗ್ಗೆ. | ಮಾನ್ಯ ಸದಸ್ಯರಾದ ಶ್ರೀ ವಿ.ಎ.ನಂಜುಂಡಸ್ವಾಮಿರವರು ಮಾತನಾಡುತ್ತಾ, ಗೊರೂರು ಜಲಾಶಯದಲ್ಲಿ ಮೀನುಮರಿ ಸಾಕಾಣಿಕೆ ಕೇಂದ್ರವಿದ್ದು, ಸುಮಾರು 12 1/2 ಎಕರೆ ಜಾಗವನ್ನು ಹೊಂದಿರುತ್ತದೆ. ಅಲ್ಲಿ ಸುಮಾರು ಮೀನುಮರಿ ಸಾಕಾಣಿಕೆ ಕೊಳಗಳು ಇರುತ್ತವೆ. ಅಲ್ಲದೆ, ಹಿಂದೆ ಜಲಾಶಯದಿಂದ ನೇರವಾಗಿ ನೀರು ಸರಬರಾಜು ವ್ಯವಸ್ಥೆಯಿತ್ತು. ಆದರೆ, ಈಗ ನೀರು ಸರಬರಾಜು ವ್ಯವಸ್ಥೆ ಇರುವುದಿಲ್ಲ. ಸದರಿ ಮೀನುಮರಿ ಕೇಂದ್ರದಲ್ಲಿ ಅಧಕಾರಿಯಿದ್ದು, ಒಬ್ಬ ಗ್ರೂಪ್-ಡಿ ನೌಕರನು ಕೆಲಸ ನಿರ್ವಹಿಸುತ್ತಿದ್ದಾರೆ. ಉಳಿದಂತೆ ಮೀನುಮರಿ ಉತ್ಪಾದನೆ ಇಲಾಖೆಯ ವತಿಯಿಂದ ಸಮರ್ಪಕ ನಿರ್ವಹಣೆಯಿಲ್ಲದೆ ಮೀನುಮರಿ ಸಾಕಾಣಿಕೆ ಕೊಳಗಳು, ಕಟ್ಟಡ ಎಲ್ಲವೂ ಹಾಳಾಗಿರುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಗಿಡಗಂಟಿಗಳು ಬೆಳೆದು ಹಾವು, ಚೇಳುಗಳು ಹೆಚ್ಚಾಗಿರುತ್ತವೆ.<br>ಮೀನುಗಾರಿಕೆ ಇಲಾಖೆಯ ವತಿಯಿಂದ ಸದರಿ ಮೀನುಮರಿ ಸಾಕಾಣಿಕೆ ಕೊಳಗಳನ್ನು ಅಭಿವೃದ್ದಿಪಡಿಸಿದಲ್ಲಿ ಅಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಮೀನುಮರಿಗಳನ್ನು ಬೆಳೆಸಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೂ ಸರಬರಾಜು ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ, ಮೀನುಮರಿ ಸಾಕಾಣಿಕೆ ಕೊಳಗಳನ್ನು ಅಭಿವೃದ್ದಿಪಡಿಸಲು ಕ್ರಮ ವಹಿಸುವಂತೆ ಮತ್ತು ಅಲ್ಲಿ ಬೆಳೆದಿರುವ ಗಿಡಗಳನ್ನು ಬೇರು ಸಮೇತ ತೆಗೆಯಲು ಕ್ರಮ ವಹಿಸುವಂತೆ ಕೋರಿದರು ಮತ್ತು ಹೇಮಾವತಿ ಜಲಾಶಯದಿಂದ ನೀರಿನ ವ್ಯವಸ್ಥೆಯನ್ನು ಕಲ್ಪಿಸಿಕೊಡುವ ಬಗ್ಗೆ | ಸಭೆಯಲ್ಲಿ ಚರ್ಚಿಸಿದಂತೆ, ಗೊರೂರು ಜಲಾಶಯದಲ್ಲಿರುವ ಮೀನುಮರಿ ಸಾಕಾಣಿಕಾ ಕೇಂದ್ರದಲ್ಲಿರುವ ಮೀನುಮರಿ ಕೊಳಗಳನ್ನು ಅಭಿವೃದ್ಧಿ ಪಡಿಸಲು, ಮೀನುಮರಿ ಸಕಾಣಿಕಾ ಕೇಂದ್ರದ ಸುತ್ತಮುತ್ತಲಿನ ಪ್ರದೇಶದಲ್ಲಿ ಬೆಳೆದಿರುವ ಗಿಡಗಂಟಿಗಳನ್ನು ಸಂಪೂರ್ಣವಾಗಿ ಬೇರು ಸಮೇತ ತೆಗೆಯಲು ಕ್ರಮ ವಹಿಸುವಂತೆ ಮತ್ತು ನೀರಿನ ಸೌಲಭ್ಯ ಕಲ್ಪಿಸುವ ಬಗ್ಗೆ ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮರವರಿಗೆ ಪತ್ರವ್ಯವಹಾರ ನಡೆಸುವಂತೆ ಹಿರಿಯ ಸಹಾಯಕ ಮೀನುಗಾರಿಕಾ ನಿರ್ದೇಶಕರಿಗೆ ತಿಳಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. ಮತ್ತು 2011-12ನೇ ಸಾಲಿನಲ್ಲಿ ಕಟ್ಟಡಗಳು ಯೋಜನೆಯಡಿಯಲ್ಲಿ ನಿಗದಿಪಡಿಸಿರುವ ರೂ.2.00ಲಕ್ಷಗಳನ್ನು ಮೀನುಮರಿ ಕೇಂದ್ರದ ಸುತ್ತಮುತ್ತ ಬೆಳೆದಿರುವ ಗಿಡಗಂಟಿಗಳನ್ನು ಬೇರು ಸಮೇತ ತೆಗೆಸಲು ಉಪಯೋಗಿಸಿಕೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

| | | | |
|---|---|---|---|
| | | ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮರವರಿಗೆ ಪತ್ರವ್ಯವಹಾರ ನಡೆಸುವಂತೆ ಹಿರಿಯ ಸಹಾಯಕ ಮೀನುಗಾರಿಕಾ ನಿರ್ದೇಶಕರಿಗೆ ತಿಳಿಸಿದರು.<br>ಮುಂದುವರೆದು 2011-12ನೇ ಸಾಲಿನ ಕಟ್ಟಡಗಳು ಯೋಜನೆಯಡಿ ನಿಗದಿಪಡಿಸಿರುವ ರೂ.2.00ಲಕ್ಷಗಳ ಅನುದಾನವನ್ನು ಮೀನುಮರಿಕೇಂದ್ರದ ಸುತ್ತಮುತ್ತ ಬೆಳೆದಿರುವ ಗಿಡಗಂಟಿಗಳನ್ನು ಬೇರು ಸಮೇತ ತೆಗೆಸಿ ಹಾಕಲು ಉಪಯೋಗಿಸಿಕೊಳ್ಳುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. | |
| 8 | | ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹಿಂದಿನ ಸಭೆಯಲ್ಲಿ ಗೊರೂರಿನಲ್ಲಿರುವ ತಾಳೆ ಸಸಿಗಳನ್ನು ನಾಟಿ ಮಾಡಿರುವ ಜಾಗದ ಬಗ್ಗೆ ಪರಿಶೀಲನೆ ನಡೆಸುವಂತೆ ತಿಳಿಸಲಾಗಿತ್ತು. ಈ ಬಗ್ಗೆ ಏನು ಕ್ರಮ ವಹಿಸಲಾಗಿದೆ ಎಂಬ ಕುರಿತು ಮಾಹಿತಿಯನ್ನು ಒದಗಿಸುವಂತೆ ಸಹಾಯಕ ನಿರ್ದೇಶಕರಿಗೆ ತಿಳಿಸಿದರು.<br>ಸಹಾಯಕ ನಿರ್ದೇಶಕರು ಉತ್ತರಿಸುತ್ತಾ, ಗೊರೂರಿನಲ್ಲಿ ತಾಳೆ ಸಸಿಗಳನ್ನು ನೆಟ್ಟಿರುವ ಜಾಗವು ವಿಶೇಷ ಭೂಸ್ವಾಧೀನಾಧಿಕಾರಿಯವರಿಗೆ ವರ್ಗಾವಣೆಗೊಂಡಿರುತ್ತದೆ. ಆದರೆ, ಯಾವಾಗ ವರ್ಗಾವಣೆ ಆಗಿದೆ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲವೆಂದು ಸಭೆಗೆ ವಿವರ ನೀಡಿದರು.<br>ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಸದರಿ ಪ್ರದೇಶವು ಇಲಾಖೆಗೆ ಸೇರಿದ ಆಸ್ತಿಯೇ ಅಥವಾ ಬೇರೆ ಇಲಾಖೆಗೆ ಸೇರಿದ ಜಾಗವೇ? ವಿಶೇಷ ಭೂಸ್ವಾಧೀನಾಧಿಕಾರಿಯವರಿಗೆ ಸದರಿ ಪ್ರದೇಶವು ವರ್ಗಾವಣೆಯಾಗಿರುವ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ವರದಿ ನೀಡುವಂತೆ ತಿಳಿಸಿದರು.<br>ಮುಂದುವರೆದು, ರೇಷ್ಮೆ, ಪಶುಪಾಲನೆ, ಕೃಷಿ, ಕೈಗಾರಿಕೆ ಮೊದಲಾದ ಇಲಾಖೆಗಳಲ್ಲಿ ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳಡಿಯಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಸಾಧನ ಸಲಕರಣೆಗಳನ್ನು/ಔಷಧಿ ಇತರೇ ವಸ್ತುಗಳನ್ನು ರಾಜ್ಯಮಟ್ಟದಲ್ಲಿ ಟೆಂಡರ್ ಕರೆದು ದರ ನಿಗದಿಪಡಿಸುವುದರ ಬದಲಿಗೆ ಜಿಲ್ಲಾ ಮಟ್ಟದಲ್ಲಿಯೇ ಟೆಂಡರ್ ಅಥವಾ ಕೊಟೇಷನ್ ಕರೆದು ಸಾಧನ, ಸಲಕರಣೆ/ಔಷಧಿ ಮತ್ತು ಇತರೇ ಸಾಮಗ್ರಿಗಳನ್ನು ಖರೀದಿಸಲು ಅನುಮತಿ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ವಹಿಸುವಂತೆ ತಿಳಿಸಿದರು.<br>ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಸಾಮಾಜಿಕ ಅರಣ್ಯ ಇಲಾಖೆಯ ವತಿಯಿಂದ ಹೊಸದಾಗಿ ಪಂಪ್‌ಸೆಟ್ ಖರೀದಿಗೆ ಮುಂಚಿತವಾಗಿ ಹಳೆಯ | ಸಭೆಯಲ್ಲಿ ಚರ್ಚಿಸಿದಂತೆ, ರೇಷ್ಮೆ, ಪಶುಪಾಲನೆ, ಕೃಷಿ, ಕೈಗಾರಿಕೆ ಮೊದಲಾದ ಇಲಾಖೆಗಳಲ್ಲಿ ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳಡಿಯಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಸಾಧನ ಸಲಕರಣೆಗಳನ್ನು/ಔಷಧಿ ಇತರೇ ವಸ್ತುಗಳನ್ನು ರಾಜ್ಯಮಟ್ಟದಲ್ಲಿ ಟೆಂಡರ್ ಕರೆದು ದರ ನಿಗದಿಪಡಿಸುವುದರ ಬದಲಿಗೆ ಜಿಲ್ಲಾ ಮಟ್ಟದಲ್ಲಿಯೇ ಟೆಂಡರ್ ಅಥವಾ ಕೊಟೇಷನ್ ಕರೆದು ಸಾಧನ, ಸಲಕರಣೆ/ಔಷಧಿ ಮತ್ತು ಇತರೇ ಸಾಮಗ್ರಿಗಳನ್ನು ಖರೀದಿಸಲು ಅನುಮತಿ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

| | | | |
|---|---|---|---|
| | | ಡೀಸೆಲ್ ಪಂಪ್‌ಸೆಟ್ ಗಳನ್ನು ಎಲ್ಲಿ ಇಡಲಾಗಿದೆ ಮತ್ತು ಅವುಗಳು ಯಾವ ಸ್ಥಿತಿಯಲ್ಲಿವೆ ಎಂಬ ಬಗ್ಗೆ ಮಾಹಿತಿಯನ್ನು ನೀಡಲು ಕ್ರಮ ವಹಿಸಬೇಕೆಂದು ಮತ್ತು ಹಳೆಯ ಡೀಸೆಲ್ ಪಂಪ್‌ಸೆಟ್‌ಗಳನ್ನು ಹರಾಜು ಮಾಡಿ ಅದರಿಂದ ಬಂದ ಹಣವನ್ನು ಸರ್ಕಾರಕ್ಕೆ ಜಮೆ ಮಾಡಲು ಕ್ರಮ ವಹಿಸಬೇಕೆಂದು ತಿಳಿಸಿದರು.<br>ಮುಂದುವರೆದು, ಗ್ರಾಮೀಣ ಪ್ರದೇಶಗಳಲ್ಲಿ ಮಧ್ಯವರ್ತಿಗಳು ಸಾಲ ಕೊಡಿಸುವುದಾಗಿ ಹೇಳಿ ರೈತರಿಂದ ಹಣ ಪಡೆಯುತ್ತಿದ್ದಾರೆ. ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವಂತೆ ಸಹಾಯಕ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆರವರಿಗೆ ತಿಳಿಸಿದರು.<br>ಸಹಾಯಕ ನಿರ್ದೇಶಕರು ಉತ್ತರಿಸುತ್ತಾ, ನಬಾರ್ಡ್ ವತಿಯಿಂದ ನೇಕಾರರ ಸಂಘಗಳಿಗೆ ನೀಡಿದ ಸಾಲದಲ್ಲಿ ಅಸಲು ದುಡ್ಡನ್ನು ಮನ್ನಾ ಮಾಡಲಾಗುತ್ತಿದ್ದು, ಯಾವ ಯಾವ ಸಹಕಾರ ಸಂಘಗಳೆಂದು ಬ್ಯಾಂಕುಗಳಿಗೆ ಪಟ್ಟಿ ಸಲ್ಲಿಸಲಾಗಿದೆ ಎಂದು ಸಭೆಗೆ ವಿವರ ನೀಡಿದರು. | |
| | ಮತ್ತ್ಯಾವುದೇ ವಿಷಯಗಳು ಚರ್ಚೆಗೆ ಬಾರದ ಹಿನ್ನೆಲೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | | |

(ಹುಚ್ಚೇಗೌಡ)
ಅಧ್ಯಕ್ಷರು,
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯಿತಿ, ಹಾಸನ.